ಓ.ಎಸ್. ನಂಃ 4 ಃ 2013
ಡಿಡಬ್ಲೂ-1

ದಿನಾಂಕಃ 05.03.2016 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಬೋಧಿಸಲಾಯಿತು.

ಪಾಟಿ ಸವಾಲುಃ ಶ್ರೀ ಎಸ್ ಜಿ ಹೆಚ್ ವಾದಿಪರ ವಕೀಲರಿಂದಃ

1968 ರಲ್ಲಿ ನಾನು ನೌಕಾದಳಕ್ಕೆ ಸೇರಿರುತ್ತೇನೆ. ನಾನು 1968 ರಿಂದ 1983 ರವರೆಗೆ ನೌಕಾದಳದ ಸೇವೆಯಲ್ಲಿದ್ದೇನು. ನಾನು 1984 ಜನೆವರಿಯಿಂದ ಮೇ ವರೆಗೆ ಮಸ್ಕೆಟ್ ದೇಶದಲ್ಲಿದ್ದೇನು. ನಾನು 1987 ರಲ್ಲಿ ಮುಂಬೈನಲ್ಲಿ ಖಾಸಗಿ ಕೆಲಸ ಮಾಡುತ್ತಿದ್ದೆ ನಂತರ ಮತ್ತೆ ಸೌದಿ ಅರೆಬಿಯಾಕ್ಕೆ ಹೋಗಿ 1989 ರವರೆಗೆ ಅಲ್ಲಿದ್ದೆನು. ನಾನು 1991 ರಲ್ಲಿ ಎಂ.ಪಿ.ಎಸ್.ಸಿ. ಪರೀಕ್ಷೆ ಪಾಸಾಗಿ 1991 ರಲ್ಲಿ ಸಹಾಯಕ ಎಂದು ನೌಕರಿಗೆ ಸೇರಿ 2006 ಜೂನವರೆಗೆ ಕೆಲಸ ನಿರ್ವಹಿಸಿರುತ್ತೇನೆ. 1968 ರಿಂದ 2006 ರವರೆಗೆ ನಾನು ನನ್ನ ಕರ್ತವ್ಯದ ಮೇಲೆ ಬೆರೆ ಬೇರೆ ಕಡೆಗೆ ಇದ್ದೆನು ಎಂದರೆ ಸರಿ. 1968 ರಿಂದ 2006 ವರೆಗೆ ನನ್ನ ಮನೆಯ ದೇಕರೇಕೆ ಮಾಡುವ ಸಂದರ್ಭ ಬಂದಿತ್ತಾ ಎಂದರೆ ಸಾಕ್ಷಿಯು ನಾನು ರಜೆಯಲ್ಲಿ ಮನೆಗೆ ಬರುತ್ತಿದ್ದೆ. ನನ್ನ ತಂದೆಯವರೊಂದಿಗೆ ಮಾತನಾಡುತ್ತಿದ್ದೆ ಮತ್ತು ನನ್ನ ಸಹೋದರಿಯರ ಮದುವೆ ಮಾಡಿದ್ದೇನೆಂದು ಉತ್ತರಿಸುತ್ತಾರೆ. 1968 ರಿಂದ 2006 ರ ಅವಧಿಯಲ್ಲಿ ಯಾವ ಯಾವ ದಿನಾಂಕದಂದು ರಜೆ ಪಡೆದು ಮನೆಗೆ ಬಂದಿದ್ದೆನು ಎಂದು ನನಗೆ ಹೇಳಲು ಆಗುವದಿಲ್ಲ.

ಸಾಕ್ಷಿಗೆ ನಿಮ್ಮ ಮನೆತನಕ್ಕೆ ಯಾವ ಯಾವ ಊರಿನಲ್ಲಿ ಎಷ್ಟು ಜಮೀನು ಇರುತ್ತದೆ ಎಂದು ಕೇಳಿದಾಗ ಸಾಕ್ಷಿ ನಮ್ಮ ಮನೆತನಕ್ಕೆ ಅರ್ಜುಣಗಿ ಗ್ರಾಮದಲ್ಲಿ ಹೊಲ ಮತ್ತು ಮನೆ ಇರುತ್ತವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸೋಲಾಪೂರನಲ್ಲಿಯೂ ಸಹ ನಮ್ಮ ಕುಟುಂಬದ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ಸೋಲಾಪೂರದ ಆಸ್ತಿ ಹೇಗೆ ಬಂತು ಎಂದು ಕೇಳಿದಾಗ ಸಾಕ್ಷಿ ಅದನ್ನು 3ನೇ ಪ್ರತಿವಾದಿ ಕುಟುಂಬದ ಆಸ್ತಿಯ ಆದಾಯದಿಂದ ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ಕುಟುಂಬದಲ್ಲಿ ಯಾರೇ ಖರೀದಿ ಮಾಡಿದ ಆಸ್ತಿ ಅದು ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಈ ಮುಂಬೈನಲ್ಲಿ ಬಾಡಿಗೆ ಮನೆಯಲ್ಲಿರುತ್ತೇನೆ. ಮುಂಬೈಯಲ್ಲಿನ ಬಾಡಿಗೆ ಮನೆ ನಿವಾಸರಾ ಪಟೊಳೆ ಎನ್ನುವವರದು ಇುರತ್ತದೆ. ಸದರಿ ಮಾಲಕರ ಮತ್ತು ನನ್ನ ನಡುವೆ ಯಾವುದೇ ಬಾಡಿಗೆ ಕರಾರು ಪತ್ರ ಮಾಡಿಕೊಂಡಿರುವದಿಲ್ಲ, ಸಾಕ್ಷಿ ನಾವು ಕುಟುಂಬದ ಸದಸ್ಯರು ಬೇರೆ ಬೇರೆ ವಾಸಿಸುತ್ತೇವೆ ಆದರೆ ನಮ್ಮ ಕುಟುಂಬದ ಆಸ್ತಿಯಲಸ್ಲಿ ಇನ್ನೂ ಪಾಲು ಆಗಿರುವದಿಲ್ಲ ಎಂದು ನುಡಿಯುತ್ತಾರೆ. ನನ್ನ

ತಂದೆಯವರು 1993 ರಲ್ಲಿ ಮೃತಪಟ್ಟಿರುತ್ತಾರೆ. ಅರ್ಜುಣಗಿ ಗ್ರಾಮದಲ್ಲಿರುವ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ, ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿನಲ್ಲಿ ಮನೆಯಿತ್ತು ಎಂದು ನುಡಿದಿರುತ್ತಾರೆ. ನಾವು ಲಿಂಗಾಯತ ಜಂಗಮ ಪಂಗಡಕ್ಕೆ ಸೇರಿದವರು ಎಂದರೆ ಸರಿ.

ಈ ಹಂತದಲ್ಲಿ ಪಾಟಿ ಸವಾಲು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪುರ